## ಕರ್ನಾಟಕ ಸರ್ಕಾರ

## (ತೋಟಗಾರಿಕೆ ಇಲಾಖೆ)

ಸಂ.ತೋಇ/ತೋಜಂನಿ/ತೋಬೆ/ಸತೋಅ-1/02/2018-19

ತೋಟಗಾರಿಕೆ, ನಿರ್ದೇಶನಾಲಯ,
ಲಾಲ್‌ಬಾಗ್, ಬೆಂಗಳೂರು-04,
ದಿನಾಂಕ: 19-05-2018.

**ಸುತ್ತೋಲೆ**

**ವಿಷಯ:** 2018-19ನೇ ಸಾಲಿನಲ್ಲಿ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಗೇರು ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿ ಕಳುಹಿಸುತ್ತಿರುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ತೋಇ 42 ತೋಯೋಕಾ 2017, ಬೆಂಗಳೂರು ದಿನಾಂಕ: 09-04-2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19 ನೇ ಸಾಲಿನಲ್ಲಿ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಗೇರು ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಒಟ್ಟು ರೂ.500.00 ಲಕ್ಷಗಳ ವಾರ್ಷಿಕ ಗುರಿಗೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಅನುಮೋದನೆಯಾಗಿರುತ್ತದೆ.

ಮುಂದುವರೆದು, ಈ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿ ಮಾರ್ಗಸೂಚಿಯಂತೆ ಗೇರು ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸೂಚಿಸಿದೆ. ಸದರಿ ಕಾರ್ಯಕ್ರಮವನ್ನು ಸಾಧಿಸಿದ ಪ್ರಗತಿಯ ವಿವರಗಳನ್ನು ಪ್ರತಿ ತಿಂಗಳು 3ನೇ ತಾರೀಖಿನೊಳಗೆ jdhpc2010@gmail.com ಗೆ ತಪ್ಪದೇ ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು
ತೋಟಗಾರಿಕೆ ಇಲಾಖೆ

ಗೆ,

ತೋಟಗಾರಿಕೆ ಉಪ ನಿರ್ದೇಶಕರು
(ಜಿಪಂ)______________ಜಿಲ್ಲೆ.

ಪ್ರತಿಯನ್ನು:

1. ತೋಟಗಾರಿಕೆ ಅಪರ ನಿರ್ದೇಶಕರು (ಹಣ್ಣುಗಳು, ಕ್ಷೇತ್ರ ಮತ್ತು ನರ್ಸರಿ, ತಾಳೆಬೆಳೆ) ಲಾಲ್‌ಬಾಗ್, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯ ನಿರ್ವಾಹಕ ನಿರ್ದೇಶಕರು, (ಕ.ರಾ.ತೋ.ಮಿ.ಏ), ಲಾಲ್‌ಬಾಗ್, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ, ತರಕಾರಿ, ಹನಿ ನೀರಾವರಿ, ಸುಜಲಾ, ಉದ್ಯಾನವನ ಮತ್ತು ತೋಟಗಳು) ಲಾಲ್‌ಬಾಗ್, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ) ಹುಳಿಮಾವು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.

# 2018-19 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಗೇರು ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿ

I. **ಕಾರ್ಯಕ್ರಮದ ಹೆಸರು:** "ಗೇರು ಅಭಿವೃದ್ಧಿ" ಕಾರ್ಯಕ್ರಮ.

II. **ಲೆಕ್ಕ ಶೀರ್ಷಿಕೆ:** 2401-00-111-0-08

III. **2018-19 ನೇ ಸಾಲಿನ ಅನುಮೋದಿತ ಅನುದಾನ:** ರೂ.500.00 ಲಕ್ಷಗಳು.

IV. **ಯೋಜನೆಯ ಸಂಕ್ಷಿಪ್ತ ಪರಿಚಯ:**

ಗೇರು ಉಷ್ಣವಲಯದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಇದನ್ನು **"ಡಾಲರ್ ಗಳಿಕೆ"** ಬೆಳೆ ಎಂದು ಗುರುತಿಸಲಾಗಿದೆ. ಗೇರನ್ನು ಹೆಚ್ಚಾಗಿ ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶಗಳು, ಒಳನಾಡು ಒಣ ಪ್ರದೇಶಗಳು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಪ್ರಮುಖವಾಗಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಚಿಕ್ಕಬಳ್ಳಾಪುರ, ಕೋಲಾರ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು, ಒಣ ಬೇಸಾಯಕ್ಕೂ ಸಹ ಸೂಕ್ತ ಬೆಳೆಯಾಗಿದೆ. ಇತರೆ ರಾಜ್ಯಗಳಿಗೆ ಹೋಲಿಸಿದ್ದಲ್ಲಿ ರಾಜ್ಯದ ಗೇರು ಬೆಳೆಯಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆ ಕಡಿಮೆ ಇರುತ್ತದೆ. ಇದಕ್ಕೆ ಪ್ರಮುಖ ಕಾರಣಗಳೆಂದರೆ.

- ಪ್ರಸ್ತುತ ಇರುವ ಗೇರು ತೋಟಗಳಲ್ಲಿ ಶೇ.80 ರಷ್ಟು ಗೇರು ತೋಟಗಳು ಬೀಜದ ಗಿಡಗಳಿಂದ ನಾಟಿ ಮಾಡಿದ್ದು, ಕಡಿಮೆ ಫಲವತ್ತತೆ, ಬೇಸಾಯಕ್ಕೆ ಯೋಗ್ಯವಲ್ಲದ ಮಣ್ಣಿನಲ್ಲಿ (ಪಾಳು/ಬಂಜರು ಜಾಗದಲ್ಲಿ) ಬೆಳೆದಿರುವುದು.
- ಗೇರು ಬೆಳೆಯನ್ನು ಕೇವಲ ಅರಣ್ಯೀಕರಣ ಬೆಳೆಯಾಗಿ, ಮಣ್ಣು ಸವಕಳಿ ಬೆಳೆಯಾಗಿ ಹಾಗೂ ಬಂಜರು ಭೂಮಿ ಬೆಳೆ ಎಂದು ಪರಿಗಣಿಸಲಾಗಿರುತ್ತದೆ.
- ಪ್ರಸ್ತುತ ಇರುವ ಗೋಡಂಬಿ ತೋಟಗಳು ಅತ್ಯಂತ ಹಳೆಯದಾಗಿದ್ದು ಅನುತ್ಪಾದಕವಾಗಿರುತ್ತದೆ ಹಾಗೂ ತೋಟಗಳ ನಿರ್ಲಕ್ಷ್ಯತೆ ಹಾಗೂ ಸಮರ್ಪಕ ನಿರ್ವಹಣೆ ಮಾಡದೇ ಇರುವುದು
- ರೈತರು ಗೊಂಡಬಿ ಬೆಳೆ ಬೆಳೆಯಲು ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಸರಿಯಾಗಿ ಅನುಸರಿಸದೇ ಇರುವುದು ಹಾಗೂ ತಂತ್ರಜ್ಞಾನ ಅಳವಡಿಸಿಕೊಳ್ಳುವ ಬಗ್ಗೆ ತಿಳುವಳಿಕೆ ಕೊರತೆ,
- ರೈತರಿಗೆ ಈ ಬೆಳೆಯಿಂದ ಬರುವ ಲಾಭಾಂಶದ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇರುವುದು

ಆದರೆ, ಗೇರು ಬೆಳೆಯು ಇತರೆ ತೋಟಗಾರಿಕೆ ಬೆಳೆಗಳಿಗೆ ಹೋಲಿಸಿದ್ದಲ್ಲಿ ಕಡಿಮೆ ನೀರಿನಲ್ಲಿಯು ಸಹ ಬೆಳೆಯಬಹುದಾದಂತಹ ಬೆಳೆಯಾಗಿದೆ, ಕೊಯ್ಲೋತ್ತರ ನಷ್ಟದ ಪ್ರಮಾಣ ಕಡಿಮೆ ಇರುವುದರಿಂದ ಹಾಗೂ ಉತ್ತಮ ಮಾರುಕಟ್ಟೆ ದೊರಕುತ್ತಿರುವುದರಿಂದ ಪ್ರಸ್ತುತ ದಿನಗಳಲ್ಲಿ ರೈತರಲ್ಲಿ ಈ ಬೆಳೆ ಬಗ್ಗೆ ಆಶಾಭಾವನೆ ಮೂಡಿದೆ. ಸುಧಾರಿತ ಕೃಷಿ ಪದ್ಧತಿ ಅಳವಡಿಸಿದ್ದಲ್ಲಿ, ಗೇರು ಬೆಳೆಯಲ್ಲೂ ಅತ್ಯಂತ ಹೆಚ್ಚು ಲಾಭವನ್ನು ಪಡೆಯಬಹುದು.

ಆದುದರಿಂದ ಗೇರು ಬೆಳೆಗೆ ಇರುವ ಉತ್ತಮ ಭವಿಷ್ಯ ಮನಗಂಡು ಸುಧಾರಿತ ಹೆಚ್ಚಿನ ಇಳುವರಿ ನೀಡುವ ತಳಿಗಳನ್ನು ನಾಟಿ ಮಾಡಲು ರೈತರನ್ನು ಪ್ರೋತ್ಸಾಹಿಸಲು ಪ್ರದೇಶ ವಿಸ್ತರಣೆ, ರೈತರಲ್ಲಿ ಗೇರು ಕೃಷಿಯ ಬಗ್ಗೆ ಅರಿವು ಮೂಡಿಸಲು ತರಬೇತಿ / Field day / ಅಧ್ಯಯನ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2018-19ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಗೇರು ಅಭಿವೃದ್ಧಿ (Cashew Development programme) ಕಾರ್ಯಕ್ರಮವನ್ನು ಲೆಕ್ಕ ಶೀರ್ಷಿಕೆ: 2401-00-111-0-08ರಡಿ ಅನುಷ್ಠಾನಗೊಳಿಸಲು ಒಟ್ಟು ರೂ.500.00 ಲಕ್ಷಗಳಿಗೆ ವಾರ್ಷಿಕ ಗುರಿ ನಿಗದಿಪಡಿಸಲಾಗಿದೆ.

## V. ಯೋಜನೆಯ ಉದ್ದೇಶಗಳು:

1. ಆಯಾ ಪ್ರದೇಶಕ್ಕೆ ಮತ್ತು ಹವಾಗುಣಕ್ಕೆ ಹೊಂದುವ ಕಸಿ ಗೇರು ಗಿಡಗಳನ್ನು ನಾಟಿ ಮಾಡುವುದು ಹಾಗೂ ಒಣ ಬೇಸಾಯ ಪದ್ಧತಿಯಲ್ಲಿ ಗೇರು ಪ್ರದೇಶ ವಿಸ್ತರಣೆ ಕೈಗೊಳ್ಳಲು ಪ್ರೋತ್ಸಾಹಿಸುವುದು.
2. ಗೇರು ಉತ್ಪಾದನೆ ಹೆಚ್ಚಿಸುವುದರ ಮುಖಾಂತರ ರೈತರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.

## VI. ಅನುಷ್ಠಾನಕ್ಕೊಳಪಡುವ ಪ್ರದೇಶಗಳ ವ್ಯಾಪ್ತಿ:

2018-19ನೇ ಸಾಲಿನಲ್ಲಿ **"ಗೇರು ಅಭಿವೃದ್ಧಿ"** ಕಾರ್ಯಕ್ರಮವನ್ನು ಬೆಂಗಳೂರು (ಗ್ರಾ), ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಾಮರಾಜನಗರ, ಚಿತ್ರದುರ್ಗ, ದಕ್ಷಿಣ ಕನ್ನಡ, ಧಾರವಾಡ, ದಾವಣಗೆರೆ, ಗದಗ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಕೊಡಗು, ಕಲಬುರಗಿ, ಮಂಡ್ಯ, ಮೈಸೂರು, ರಾಮನಗರ, ರಾಯಚೂರು, ಶಿವಮೊಗ್ಗ,

ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವುದು.

## VII. ಅನುಷ್ಠಾನದ ಮುಖ್ಯ ಘಟಕ ಕಾರ್ಯಕ್ರಮಗಳು:

1. ಹೊಸ ಗೇರು ಪ್ರದೇಶ ವಿಸ್ತರಣೆ.
2. ಮೊದಲನೇ ವರ್ಷದ ನಿರ್ವಹಣೆ (2017-18 ನೇ ಸಾಲಿನಲ್ಲಿ ನಾಟಿ ಮಾಡಿದ ತಾಕುಗಳ ನಿರ್ವಹಣೆ)
3. ತರಬೇತಿ / ಕ್ಷೇತ್ರೋತ್ಸವ /ಅಧ್ಯಯನ ಪ್ರವಾಸ / ಆಡಳಿತಾತ್ಮಕ ವೆಚ್ಚ

## VIII. ತಾಂತ್ರಿಕ ವೈಶಿಷ್ಟತೆಗಳು ಮತ್ತು ಸಹಾಯಧನ:

### 1. ಹೊಸ ಗೇರು ಪ್ರದೇಶ ವಿಸ್ತರಣೆ:

ರಾಜ್ಯದಲ್ಲಿ ಗೇರು ಬೆಳೆ ಅಭಿವೃದ್ಧಿಗಾಗಿ ಅಧಿಕ ಇಳುವರಿ ನೀಡುವ ಹಾಗೂ ಆಯಾ ಪ್ರದೇಶಕ್ಕೆ ಹೊಂದುವ ಕಸಿ ಗಿಡಗಳ ನಾಟಿ ಮಾಡುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿರುತ್ತದೆ.

ಹೊಸದಾಗಿ ಗೇರು ಪ್ರದೇಶ ವಿಸ್ತರಣೆ ಕೈಗೊಳ್ಳಲು ಆಯಾ ಹವಾಗುಣಕ್ಕೆ ಹೊಂದಿಕೊಳ್ಳುವ ಹಾಗೂ ಶಿಫಾರಸ್ಸು ಮಾಡಿರುವ ವಿವಿಧ ತಳಿಗಳಾದ ಉಲ್ಲಾಳ-1, ಉಲ್ಲಾಳ-2, ಉಲ್ಲಾಳ-3, ಉಲ್ಲಾಳ-4, ವೆಂಗುರ್ಲಾ-3, ವೆಂಗುರ್ಲಾ-4, ವೆಂಗುರ್ಲಾ-7, ವೆಂಗುರ್ಲಾ-8, ಇತ್ಯಾದಿ ಸುಧಾರಿತ ತಳಿಗಳನ್ನು ನಾಟಿ ಮಾಡಲು ರೈತರನ್ನು ಪ್ರೋತ್ಸಾಹಿಸುವುದು.

ಗೇರು ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಸಾಮಾನ್ಯ ಫಲಾನುಭವಿಗಳಿಗೆ (General) ಒಂದು ಘಟಕಕ್ಕೆ (1 ಹೆಕ್ಟೇರ್) ತಗಲುವ ಒಟ್ಟಾರೆ ವೆಚ್ಚದ ಶೇ.50 ರಂತೆ, ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.22539/-ಗಳ ಸಹಾಯಧನವನ್ನು ಹಾಗೂ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ರೈತರಿಗೆ ಒಟ್ಟಾರೆ ವೆಚ್ಚದ ಶೇ.90 ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಟ ರೂ.40569/-ಗಳಂತೆ ಪ್ರತಿ ಫಲಾನುಭವಿಗೆ 0.2 ಹೆಕ್ಟೇರ್ ನಿಂದ 4 ಹೆಕ್ಟೇರ್ ವರೆಗೆ ಸಹಾಯಧನವನ್ನು ನೀಡುವುದು. ಗೇರು ಪ್ರದೇಶ ವಿಸ್ತರಣೆ ಕಾರ್ಯಕ್ರಮದ ಘಟಕವಾರು ವೆಚ್ಚಗಳ ವಿವರವನ್ನು ಈ ಕೆಳಕಂಡ ಕೋಷ್ಟಕ-1 ರಲ್ಲಿ ನೀಡಿದೆ.

**ಕೋಷ್ಟಕ-1:** ಒಂದು ಹೆಕ್ಟೇರ್ ಪ್ರದೇಶದಲ್ಲಿ ಗೇರು ಪ್ರದೇಶ ವಿಸ್ತರಣೆ ಕೈಗೊಳ್ಳಲು ತಗಲುವ ಒಟ್ಟು ವೆಚ್ಚ ದ ವಿವರ ಈ ಕೆಳಕಂಡಂತಿದೆ

(ಅಂತರ: 7ಮೀ. x 7 ಮೀ.   204 ಗಿಡಗಳು/ಹೆ.)                (ಆರ್ಥಿಕ :ರೂ.ಗಳಲ್ಲಿ)

| ಕ್ರ. ಸಂ | ಘಟಕ ಕಾರ್ಯಕ್ರಮಗಳು | ಘಟಕ ದರ | ತಗಲುವ ಒಟ್ಟು ವೆಚ್ಚ ಪ್ರತಿ ಹೆ. | ಸಹಾಯಧನ (ಸಾಮಾನ್ಯ ಫಲಾನುಭವಿಗಳಿಗೆ) | ಸಹಾಯಧನ (ಪರಿಶಿಷ್ಟ ಜಾತಿ/ ಪಂಗಡ ಫಲಾನುಭವಿಗಳಿಗೆ) |
|---|---|---|---|---|---|
| 1 | ಭೂಮಿ ಸಿದ್ಧತೆ | | 6000 | 3000 | 5400 |
| 2 | ಗುಂಡಿ ತೆಗೆಯುವುದು (0.75ಮೀ x0.75ಮೀ x0.75ಮೀ) | 118.76/ಘ. ಮೀ | 10200 | 5100 | 9180 |
| 3 | FYM - (20kg/plant) ಮತ್ತು ಬೇವಿನ ಹಿಂಡಿ | FYM -1.5/kg, Neem cake-20/kg | 10200 | 3570 | 8874 |
| 4 | ಗುಣಿಯಿಂದ ತೆಗೆದ ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರ ಮಿಶ್ರಣ ಮಾಡಿ ಶೇ.90ರಷ್ಟು ಗುಣಿ ತುಂಬುವುದು. | 12.88/ಘ. ಮೀ | 1103 | 551.5 | 992.7 |
| 5 | ಗಿಡಗಳ ವೆಚ್ಚ (ಸಾಗಾಣಿಕೆ ವೆಚ್ಚ ಸೇರಿದಂತೆ ) | ರೂ.50/ಗಿಡ | 10200 | 5100 | 9180 |
| 6 | ಗಿಡ ನೆಡುವುದು ಮತ್ತು ಆಧಾರ ಕೋಲು ಕಟ್ಟುವುದು | 7/ ಗಿಡ | 1428 | 714 | 1285.2 |
| 7 | ಲಘು ಪೋಷಕಾಂಶಗಳು ( 5kg/ha) | ( 5kg/ha) | 750 | 375 | 675 |
| 8 | ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು | ರೂ.15/ಗಿಡ | 3060 | 3060 | 3060 |
| 9 | ಗಿಡಗಳಿಗೆ ಗೊಬ್ಬರ ಹಾಕುವ ವೆಚ್ಚ | 7/ ಗಿಡ | 1428 | 714 | 1285.2 |
| 10 | ಗಿಡಗಳ ಸುತ್ತ ಹೊದಿಕೆ ಮಾಡುವುದು (ಸಾವಯವ ಹೊದಿಕೆ) | ರೂ.2/ಗಿಡ | 408 | 204 | 367.2 |
| 11 | ನಾಮ ಫಲಕ ಅಳವಡಿಸುವುದು | | 300 | 150 | 270 |
| | ಒಟ್ಟು | | 45,077 | 22538.5 | 40569.3 |

**ಟಿಪ್ಪಣಿ:** ಕೋಷ್ಟಕ-1 ರ ಕ್ರಮ ಸಂಖ್ಯೆ (8)ರ ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು ಘಟಕ ಕಾರ್ಯಕ್ರಮಕ್ಕೆ ತಗಲುವ ವೆಚ್ಚ ರೂ.3060/- ನ್ನು ಸಹಾಯಧನಕ್ಕೆ ಎಲ್ಲಾ ವರ್ಗದ ಫಲಾನುಭವಿಗಳಿಗೆ ಶೇ.100 ರಂತೆ ಪರಿಗಣಿಸುವುದು ಹಾಗೂ ಕ್ರಮ ಸಂಖ್ಯೆ (3) ರಲ್ಲಿ ಪ್ರತಿ ಹೆಕ್ಟೇರ್ ಗೆ ಸಾಮಾನ್ಯ ಫಲಾನುಭವಿಗಳಿಗೆ ರೂ.3570/- ಹಾಗೂ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ರೈತರಿಗೆ ರೂ.8874/- ನ್ನು ಸಹಾಯಧನಕ್ಕೆ ಪರಿಗಣಿಸುವುದು.

## 2. ಮೊದಲನೇ ವರ್ಷದ ನಿರ್ವಹಣೆ:

2017-18 ನೇ ಸಾಲಿನಲ್ಲಿ ನಾಟಿ ಮಾಡಿದ ತೋಟಗಳನ್ನು 2018-19 ನೇ ಸಾಲಿನಲ್ಲಿ ಮೊದಲನೇ ವರ್ಷದ ನಿರ್ವಹಣೆಗಾಗಿ ಪ್ರತಿ ಹೆಕ್ಟೇರ್ ಗೆ ತಗಲುವ ಒಟ್ಟು ಘಟಕ ವೆಚ್ಚದ ಶೇ.50 ರಂತೆ ಸಾಮಾನ್ಯ ಫಲಾನುಭವಿಗಳಿಗೆ ರೂ.10954/- ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಟ್ಟು ಘಟಕ ವೆಚ್ಚದ ಶೇ.90 ರಂತೆ ರೂ. 19717.20/- ರಂತೆ ಪ್ರತಿ ಫಲಾನುಭವಿಗೆ ಸಹಾಯಧನವನ್ನು ನೀಡಲಾಗುವುದು.

**ಕೋಷ್ಟಕ-2:**

| ಕ್ರ. ಸಂ | ಘಟಕ ಕಾರ್ಯಕ್ರಮಗಳು | ಘಟಕ ದರ (ರೂ.ಗಳಲ್ಲಿ) | ತಗಲುವ ಒಟ್ಟು ವೆಚ್ಚ ಪ್ರತಿ ಹೆ. (ರೂ.ಗಳಲ್ಲಿ) | ಸಹಾಯಧನ (ಸಾಮಾನ್ಯ ಫಲಾನುಭವಿಗೆ) | ಸಹಾಯಧನ (ಪರಿಶಿಷ್ಟ ಜಾತಿ/ ಪಂಗಡ ಫಲಾನುಭವಿಗಳಿಗೆ) |
|---|---|---|---|---|---|
| 1 | ಒಣಗಿರುವ ಗಿಡಗಳನ್ನು ತೆಗೆದು ಹೊಸದಾಗಿ ನಾಟಿ ಮಾಡುವುದು (ಶೇ.10 ಅಥವಾ ಗರಿಷ್ಠ 30 ಗಿಡಗಳು) | ರೂ.30/ಗಿಡ | 900 | 450 | 810 |
| 2 | ಗಿಡ ನೆಡುವುದು ಮತ್ತು ಆಧಾರ ಕೋಲು ಕಟ್ಟುವುದು | ರೂ.7/ಗಿಡ | 210 | 105 | 189 |
| 3 | ಕೊಟ್ಟಿಗೆ ಗೊಬ್ಬರ (1.5kg/ ಗಿಡ) ಮತ್ತು ಬೇವಿನ ಹಿಂಡಿ ( 20kg/ ಗಿಡಕ್ಕೆ) | FYM , Neem cake | 12465 | 4155 | 10803 |
| 4 | ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು | ರೂ.15/ಗಿಡ | 4155 | 4155 | 4155 |
| 5 | ಕಳೆ ತೆಗೆಯುವುದು, ಅಂತರ ಬೇಸಾಯ, ಇತ್ಯಾದಿ | | 4178 | 2089 | 3760.2 |
| | ಒಟ್ಟು | | 21908 | 10954 | 19717.2 |

**ಟಿಪ್ಪಣಿ:** ಕೋಷ್ಟಕ-2 ರ ಕ್ರಮ ಸಂಖ್ಯೆ (4)ರ ಜೈವಿಕ ಗೊಬ್ಬರ/ಜೈವಿಕ ನಿಯಂತ್ರಕಗಳು ಘಟಕ ಕಾರ್ಯಕ್ರಮಕ್ಕೆ ತಗಲುವ ವೆಚ್ಚ ರೂ.4155/- ನ್ನು ಸಹಾಯಧನಕ್ಕೆ ಎಲ್ಲಾ ವರ್ಗದ ಫಲಾನುಭವಿಗಳಿಗೆ ಶೇ.100 ರಂತೆ ಪರಿಗಣಿಸುವುದು ಹಾಗೂ ಕ್ರಮ ಸಂಖ್ಯೆ (3) ರಲ್ಲಿ ಪ್ರತಿ ಹೆಕ್ಟೇರ್ ಗೆ ಸಾಮಾನ್ಯ ಫಲಾನುಭವಿಗಳಿಗೆ

ರೂ.4155/- ಹಾಗೂ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ರೈತರಿಗೆ ರೂ.10803/- ನ್ನು ಸಹಾಯಧನಕ್ಕೆ ಪರಿಗಣಿಸುವುದು.

### 3. ತರಬೇತಿ /ಕ್ಷೇತ್ರೋತ್ಸವ/ ಅಧ್ಯಯನ ಪ್ರವಾಸ/ ಆಡಳಿತಾತ್ಮಕ ವೆಚ್ಚ:

ಗೇರು ಬೆಳೆಯ ಸುಧಾರಿತ ಪದ್ಧತಿಗಳ ಬಗ್ಗೆ, ಉತ್ಪಾದನೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸಲು, ಸುಧಾರಿತ ತಳಿಗಳ ಶಿಪಾರಸ್ಸು ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ರಾಜ್ಯದ ಕೃಷಿ/ತೋಟಗಾರಿಕೆ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು ಅಥವಾ ಕೃಷಿ ವಿಜ್ಞಾನ ಕೇಂದ್ರದ ತಜ್ಞರುಗಳಿಂದ, ಸರ್ಕಾರೇತರ ಸಂಸ್ಥೆಗಳ ವಿಷಯ ತಜ್ಞರುಗಳನ್ನು ತರಬೇತಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ವಿಚಾರ ವಿನಿಮಯಗೊಳಿಸುವುದು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರತಿ ತರಬೇತಿ ಕಾರ್ಯಕ್ರಮಕ್ಕೆ ರೂ.15,000/-ಗಳಂತೆ NHM ಮಾರ್ಗಸೂಚಿ ಪ್ರಕಾರ ವೆಚ್ಚ ಭರಿಸುವುದು.

ಪ್ರಗತಿಪರ ಗೇರು ರೈತರ ತೋಟಗಳಲ್ಲಿ/ಸರ್ಕಾರಿ ಅಥವಾ ಸರ್ಕಾರೇತರ ಸಂಸ್ಥೆಗಳಲ್ಲಿರುವ ಹೆಚ್ಚಿನ ಇಳುವರಿ ನೀಡುವ ಹಾಗೂ ಸುಧಾರಿತ ಪದ್ಧತಿಗಳನ್ನು ಅಳವಡಿಸಿಕೊಂಡಿರುವ ಮಾದರಿ ಗೇರು ತಾಕುಗಳಲ್ಲಿ ಕ್ಷೇತ್ರೋತ್ಸವ ಕಾರ್ಯಕ್ರಮಗಳನ್ನು ಆಯೋಜಿಸುವುದು. ಪ್ರತಿ ಕ್ಷೇತ್ರೋತ್ಸವ ಕಾರ್ಯಕ್ರಮಕ್ಕೆ ರೂ.10,000/-ಗಳಂತೆ ವೆಚ್ಚ ಭರಿಸುವುದು. ರೈತರಿಗೆ ವೈಜ್ಞಾನಿಕ ಪದ್ಧತಿಯಲ್ಲಿ ಗೇರು ಕೃಷಿಯಲ್ಲಿ ತೊಡಗಿಸಿಕೊಳ್ಳಲು ತಾಂತ್ರಿಕ ಮಾಹಿತಿ ಒದಗಿಸಲು ಹಾಗೂ ಗೇರು ಸಂಸ್ಕರಣಾ ಘಟಕಗಳ ಬಗ್ಗೆ ಅರಿವು ಮೂಡಿಸಿ, ಅಳವಡಿಸುವ ಸಲುವಾಗಿ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳುವುದು. ಸದರಿ ಕಾರ್ಯಕ್ರಮಕ್ಕೆ NHM ಮಾರ್ಗಸೂಚಿ ಪ್ರಕಾರ ವೆಚ್ಚ ಭರಿಸುವುದು. ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಕಛೇರಿಗಳಿಗೆ ಅವಶ್ಯಕತೆಯಿರುವ ಲೇಖನ ಸಾಮಾಗ್ರಿಗಳು, ಇತ್ಯಾದಿ ಮತ್ತು ಯೋಜನೆ ಪ್ರಚಾರ ಕಾರ್ಯಕ್ರಮ, ಇತ್ಯಾದಿ ವೆಚ್ಚಗಳಿಗೆ NHM ಮಾರ್ಗಸೂಚಿಯಂತೆ ನಿಯಮಾನುಸಾರ ಖರ್ಚು ಭರಿಸುವುದು.

## IX. ಕಾರ್ಯಕ್ರಮ ಅನುಷ್ಠಾನ ವಿಧಾನ:

ಪ್ರತಿ ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ)ರವರು ಯೋಜನೆಯ ಅನುಷ್ಠಾನ ಉಸ್ತುವಾರಿಯನ್ನು ನೋಡಿಕೊಳ್ಳುವುದು ಮತ್ತು ಜಿಲ್ಲೆಯ ಅನುಮೋದಿತ ಕ್ರಿಯಾಯೋಜನೆ, ಮೀಸಲಾತಿ ಹಾಗೂ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ (MPIC)ಯಂತೆ ಆಯಾ

ಘಟಕಗಳಿಗೆ ನಿಗದಿಯಾಗಿರುವ ಅನುದಾನ ಮೀರದಂತೆ ಯೋಜನೆ ಅನುಷ್ಠಾನಗೊಳಿಸುವುದು. ತಾಲ್ಲೂಕು ಬಟವಾಡೆ ಅಧಿಕಾರಿಗಳು ಹಾಗೂ ಸಹಾಯಕ ತೋಟಗಾರಿಕೆ ಅಧಿಕಾರಿ (RSK) ರವರು ಅನುಷ್ಠಾನ ಅಧಿಕಾರಿಗಳಾಗಿ ಕೆಲಸ ನಿರ್ವಹಿಸುವುದು ಸದರಿ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಅನುಷ್ಠಾನ ವಿಧಾನಗಳನ್ನು ಅನುಸರಿಸುವುದು.

1. ಯೋಜನೆಯ ವಿವರಗಳ ಬಗ್ಗೆ ಎಲ್ಲಾ ಹಳ್ಳಿಗಳಲ್ಲೂ ಕರಪತ್ರ, ಬ್ಯಾನರ್, ವರ್ಕ್‌ಶಾಪ್, ಮುಂತಾದವುಗಳ ಮೂಲಕ ಪ್ರಚಾರ ಕೈಗೊಳ್ಳುವುದು.

2. ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ , ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತೀ ಸಣ್ಣ ರೈತರು ಮತ್ತು ರೈತ ಮಹಿಳೆಯರಿಗೆ ಆದ್ಯತೆ ಮೇರೆಗೆ ಅನುದಾನ ಮೀಸಲಿಡುವುದು.

3. ಆಯ್ಕೆಯಾದ ರೈತರಿಗೆ ಗೇರು ಉತ್ಪಾದಕತೆ ಹೆಚ್ಚಿಸಲು ತರಬೇತಿ /ಪ್ರಾತ್ಯಕ್ಷತೆ /ಕ್ಷೇತ್ರೋತ್ಸವ/ ಅಧ್ಯಯನ ಪ್ರವಾಸ, ಕೈಗೊಳ್ಳುವುದು.

4. ಸಹಾಯಕ ತೋಟಗಾರಿಕೆ ಅಧಿಕಾರಿಗಳು (RSK) ಸದರಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ತಾಕುಗಳಿಗೆ ಭೇಟಿ ನೀಡಿ ಘಟಕವಾರು ಕಾರ್ಯಕ್ರಮಗಳನ್ನು ತೋಟಗಳಲ್ಲಿ ಹಮ್ಮಿಕೊಳ್ಳಲು ಫಲಾನುಭವಿಗಳಿಗೆ ಪ್ರೇರೇಪಿಸುವುದು.

5. ಗೇರು ಪ್ರದೇಶ ವಿಸ್ತರಣೆಗೆ ಇಲಾಖೆಯ ನರ್ಸರಿ / ಕ್ಷೇತ್ರಗಳಲ್ಲಿ ಉತ್ಪಾದಿಸಿರುವ ಕಸಿ ಗೇರು ಗಿಡಗಳನ್ನು ಆದ್ಯತೆ ಮೇರೆಗೆ ರೈತರಿಗೆ ಒದಗಿಸುವುದು. ಇಲಾಖೆ ನರ್ಸರಿ / ಕ್ಷೇತ್ರಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ / ಗೇರು ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯದಿಂದ ದೃಢೀಕರಿಸಿರುವ ನರ್ಸರಿಗಳಿಂದ ನಿಯಾಮನುಸಾರ ಖರೀದಿಸಿ ರೈತರಿಗೆ ವಿತರಿಸುವುದು ಹಾಗೂ ಸಹಾಯಧನದಲ್ಲಿ ಗಿಡಗಳ ವೆಚ್ಚವನ್ನು ಕಡಿತಗೊಳಿಸಿ ಉಳಿದ ಘಟಕ ಕಾರ್ಯಕ್ರಮಗಳಿಗೆ ಸಹಾಯಧನವನ್ನು ಫಲಾನುಭವಿಗಳು ತಮ್ಮ ತೋಟಗಳಲ್ಲಿ

ಅಳವಡಿಸಿಕೊಂಡ ನಂತರ ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುವುದು ಅಥವಾ ಗೇರು ಕಸಿ ಸಸಿಗಳನ್ನು ರೈತರೇ ನೇರವಾಗಿ ಖರೀದಿಸಿದ್ದಲ್ಲಿ ಸಹಾಯಧನಕ್ಕೆ ಪರಿಗಣಿಸುವುದು.

6. ಈ ಯೋಜನೆಯಡಿ ಅಗತ್ಯವಿರುವ ಜೈವಿಕ ಪರಿಕರಗಳನ್ನು (ಜೈವಿಕ ಗೊಬ್ಬರ/ನಿಯಂತ್ರಕಗಳನ್ನು) ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರಗಳಿಂದ ರೈತರಿಗೆ ವಿತರಿಸುವುದು ಅಥವಾ ರೈತರೇ ನೇರವಾಗಿ ಖರೀದಿಸಿದ್ದಲ್ಲಿ ಸಹಾಯಧನಕ್ಕೆ ಪರಿಗಣಿಸುವುದು.

   <u>ಸೂಚನೆ:</u> ಗೇರು ಅಭಿವೃದ್ಧಿ ಕಾರ್ಯಕ್ರಮದಡಿ ಬೇಕಾಗುವ ಜೈವಿಕ ಗೊಬ್ಬರ ಹಾಗೂ ಗೇರು ಕಸಿಗಿಡಗಳನ್ನು ಇಲಾಖಾವತಿಯಿಂದ ಖರೀದಿಸಿದ್ದಲ್ಲಿ ಸಾಗಾಣಿಕಾ ವೆಚ್ಚವನ್ನು ಆಡಳಿತಾತ್ಮಕ ವೆಚ್ಚದಲ್ಲಿ ಭರಿಸುವುದು.

7. ಸದರಿ ಯೋಜನೆಯಡಿ ರೈತರು ಅಗತ್ಯವಿರುವ ಪರಿಕರಗಳನ್ನು ಕೃಷಿ ಇಲಾಖೆಯಿಂದ ಅನುಮೋದನೆಯಾಗಿರುವ Empanel list ರಲ್ಲಿರುವ ಸರಬರಾಜುದಾರರಿಂದ ಪರಿಕರಗಳನ್ನು ಇಲಾಖಾವತಿಯಿಂದ ಖರೀದಿಸಿ ರೈತರಿಗೆ ವಿತರಿಸುವುದು ಅಥವಾ ರೈತರು Empanel list ಕಂಪನಿಗಳಿಂದ ಪೂರ್ಣ ಹಣ ಪಾವತಿಸಿ ಖರೀದಿಸಿ ಸಹಾಯಧನವನ್ನು ಪಡೆಯುವುದು ಅಥವಾ part payment ಮಾಡಿ ಉಳಿದ ಹಣವನ್ನು ಕಂಪನಿಯವರಿಗೆ ನೇರವಾಗಿ ಪಾವತಿಸಲು ರೈತರು ಇಲಾಖೆಗೆ ಅರ್ಜಿಯಲ್ಲಿ ಸಲ್ಲಿಸುವುದು.

8. ಆಯ್ಕೆಯಾದ ರೈತ ಫಲಾನುಭವಿಗಳು ಘಟಕವಾರು ತಿಳಿಸಿರುವ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದನ್ನು ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಖಾತ್ರಿ ಪಡಿಸಿಕೊಳ್ಳುವುದು.

9. ಸಹಾಯಕ ತೋಟಗಾರಿಕೆ ಅಧಿಕಾರಿಗಳು (RSK) ಸದರಿ ಯೋಜನೆಯಡಿ ಘಟಕವಾರು ಕಾರ್ಯಕ್ರಮದಡಿ ರೈತ ಫಲಾನುಭವಿಗಳು ಭರಿಸಿದ ಖರ್ಚನ್ನು ನಿಯಾಮಾನುಸಾರ ಲೆಕ್ಕಚಾರ ಮಾಡಿ ಸಹಾಯಧನಕ್ಕೆ ಶಿಫಾರಸ್ಸು ಮಾಡಿ ಅರ್ಜಿ ಜೊತೆಗೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ವಿಳಂಬವಾಗದಂತೆ ತಾಲ್ಲೂಕು ಬಟವಾಡೆ ಅಧಿಕಾರಿಯವರಿಗೆ ಸಲ್ಲಿಸುವುದು.

10. ಸಂಬಂಧಿಸಿದ ತಾಲ್ಲೂಕು ಬಟವಾಡೆ ಅಧಿಕಾರಿಗಳು, ಸದರಿ ಅರ್ಜಿಗಳನ್ನು ಪರಿಶೀಲಿಸಿ ನ್ಯೂನ್ಯತೆ ಇರುವ ಅರ್ಜಿಗಳನ್ನು ತಿರಸ್ಕರಿಸುವುದು, ಸದರಿ ತಾಕುಗಳಿಗೆ ಭೇಟಿ ನೀಡುವುದು ಹಾಗೂ ಯೋಗ್ಯವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಹಾಯಧನವನ್ನು ಲೆಕ್ಕಾಚಾರ ಮಾಡಿ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸಿ ಮೇಲು ಸಹಿಗಾಗಿ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರ ರವರಿಗೆ ಸಲ್ಲಿಸುವುದು.

11. ಮೇಲು ಸಹಿಗಾಗಿ ಸಲ್ಲಿಸಲಾದ ಸಾದಿಲ್ವಾರು ಬಿಲ್ಲುಗಳನ್ನು ಸಂಬಂಧಿಸಿದ ಜಿಲ್ಲಾ ತೋಟಗಾರಿಕೆ ಉಪನಿರ್ದೇಶಕರ ರವರು ಪರಿಶೀಲಿಸಿ ನಿಯಮಾನುಸಾರ ಸಹಾಯಧನ ಮಂಜೂರಾತಿಗೆ ವಿಳಂಬವಾಗದಂತೆ ಅಗತ್ಯ ಕ್ರಮಕೈಗೊಳ್ಳುವುದು.

12. ತಾಲ್ಲೂಕು ಬಟವಾಡೆ ಅಧಿಕಾರಿಗಳು ಮಂಜೂರಾದ ಸಹಾಯಧನದ ಮೊತ್ತವನ್ನು ನೇರವಾಗಿ ರೈತ ಫಲಾನುಭವಿಯ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸುವುದು.

**Level of Inspection:**

ಹೋಬಳಿ ಮಟ್ಟದ ಅಧಿಕಾರಿಗಳು-100%

ತಾಲ್ಲೂಕು ಮಟ್ಟದ ಅಧಿಕಾರಿ-50%

ಜಿಲ್ಲಾ ಮಟ್ಟದ ಅಧಿಕಾರಿ-10%

ಈ ಯೋಜನೆಯ ಕಾರ್ಯ ಸ್ವರೂಪ, ಸಮರ್ಪಕ ಅನುಷ್ಠಾನ ಹಾಗೂ ಮೇಲುಸ್ತುವಾರಿಗಾಗಿ ನಿರ್ದೇಶನಾಲಯದಲ್ಲಿ ತೋಟಗಾರಿಕೆ ಅಪರ ನಿರ್ದೇಶಕರು (ತಾಳೆಬೆಳೆ) / ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರು ನಿರ್ದೇಶನಾಲಯದ ಉಸ್ತುವಾರಿ ಅಧಿಕಾರಿಗಳಾಗಿರುತ್ತಾರೆ.

## X. ಫಲಾನುಭವಿಗಳ ಅರ್ಹತೆ ಮತ್ತು ಆಯ್ಕೆ:

- ಫಲಾನುಭವಿಗಳ ಹೆಸರಿನಲ್ಲಿ ಜಮೀನು ಹೊಂದಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರು ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
- ಎಲ್ಲಾ ವರ್ಗದ ಫಲಾನುಭವಿಗಳು ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ, ಅತೀ ಸಣ್ಣ ರೈತರು ಹಾಗೂ ರೈತ ಮಹಿಳೆಯರು ಸಹಾಯಧನಕ್ಕೆ ಪರಿಗಣಿಸಬಹುದು.
- ಫಲಾನುಭವಿಯು ಕೋಷ್ಟಕಗಳಲ್ಲಿ ತಿಳಿಸಿರುವಂತೆ ಎಲ್ಲಾ ಘಟಕ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಸಿದ್ಧರಿರಬೇಕು.

- ಅರ್ಹ ರೈತರಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸುವುದು (ಅರ್ಜಿ ಪ್ರತಿ ಲಗತ್ತಿಸಿದೆ). ಅರ್ಜಿ ಜೊತೆಗೆ ಕಡ್ಡಾಯವಾಗಿ ಅರ್ಜಿದಾರರ ಎಪಿಕ್ ಸಂಖ್ಯೆ (Voter ID) ಮತ್ತು ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ ಪಡೆಯುವುದು.
- ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಘಟಕವಾರು ಕಾರ್ಯಕ್ರಮಗಳನ್ನು ಆಯ್ಕೆಯಾದ ರೈತ ಫಲಾನುಭವಿಗಳು ಸ್ವಂತ ಖರ್ಚಿನಲ್ಲಿ ಹಮ್ಮಿಕೊಂಡು ನಂತರ ಸಹಾಯಧನಕ್ಕೆ ಅರ್ಜಿ ಸಲ್ಲಿಸುವುದು.

## XI. ಫಲಾನುಭವಿಗಳು ಅರ್ಜಿ ಜೊತೆಗೆ ಸಲ್ಲಿಸಬೇಕಾದ ದಾಖಲಾತಿಗಳು:

- ನಿಗದಿತ ನಮೂನೆಯ ಅರ್ಜಿ (ಅನುಬಂಧ-1).
- ಪಹಣಿ (RTC ಯಲ್ಲಿ ಬೆಳೆ ನಮೂದಾಗಿಲ್ಲದಿದ್ದಲ್ಲಿಬೆಳೆ ಧೃಡೀಕರಣ ಪತ್ರ).
- ಮುಂಗಡ ಹಣ ಸಂದಾಯ ರಶೀದಿ.
- ಅಗತ್ಯವಿರುವ Claim bill / ರಸೀದಿ/ TIN ಸಂಖ್ಯೆ ಇರುವ ಬಿಲ್ಲುಗಳು.
- ಸ್ವಯಂ ಘೋಷಣೆ ಪತ್ರ.
- ಫಲಾನುಭವಿಯೊಂದಿಗೆ ತಾಕಿನ ಜಿಪಿಎಸ್ ಛಾಯಚಿತ್ರ.
- ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿ.
- ಪರಿಶೀಲನಾಧಿಕಾರಿಗಳ ಧೃಡೀಕರಣ.

## XII. ಇತರೆ ಯೋಜನೆಗಳಡಿ ಏಕೀಕರಿಸಿ (Convergence) ಅನುಷ್ಠಾನ ಮಾಡುವುದು:

ಈ ಯೋಜನೆಯ ಜೊತೆಗೆ ಇತರೆ ಯೋಜನೆಗಳಾದ ಕೇಂದ್ರ ಪುರಸ್ಕೃತ ಹನಿ ನೀರಾವರಿ ಯೋಜನೆಯಡಿ ಹನಿ ನೀರಾವರಿ ಹಾಗೂ ರಸಾವರಿ ಘಟಕಗಳ ಕಾರ್ಯಕ್ರಮಗಳನ್ನು ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಕಡ್ಡಾಯವಾಗಿ ಏಕೀಕರಿಸಿ ಅನುಷ್ಠಾನಗೊಳಿಸುವುದು (Convergence).

## XIII. ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು:

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇಮೇಲ್ ಮೂಲಕ ತಿಂಗಳ 3 ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು (ಸಮಸ್ಯೆ ಇದ್ದಲ್ಲಿ, ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ವಿಭಾಗವನ್ನು ಸಂಪರ್ಕಿಸುವುದು.

2. ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದಾಗುವ ಪ್ರಯೋಜನಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಫಿ ಮತ್ತು ಹಾರ್ಡ್ ಕಾಪಿಯೊಂದಿಗೆ ತೋಟಗಾರಿಕೆ ಜಂಟಿ ನಿರ್ದೇಶಕರು (ತೋಟದ ಬೆಳೆಗಳು ಮತ್ತು ಸಸ್ಯ ಸಂರಕ್ಷಣೆ) ರವರಿಗೆ ಕಳುಹಿಸುವುದು.

ನಿರ್ದೇಶಕರು

ತೋಟಗಾರಿಕೆ ಇಲಾಖೆ

# ಅನುಬಂಧ

## ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅನುಷ್ಠಾನಗೊಳಿಸಲಾಗುವ ಗೇರು ಅಭಿವೃದ್ಧಿ ಕಾರ್ಯಕ್ರಮದಡಿ ಪ್ರದೇಶ ವಿಸ್ತರಣೆಗೆ ಪ್ರೋತ್ಸಾಹಧನ ಕೋರಲು ಅರ್ಜಿ ನಮೂನೆ

ತಾಲ್ಲೂಕು__________________ಹೋಬಳಿ_____________ಗುಚ್ಛ____________

ಗೆ,

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

ಜಿಲ್ಲಾ ಪಂಚಾಯತ್

------------ತಾಲ್ಲೂಕು

Pass port size Photograph

| ಕ್ರ.ಸಂ. | ವಿವರ | |
|---|---|---|
| 1 | ಅರ್ಜಿದಾರರ ಹೆಸರು | |
| 2 | ಅಂಚೆ ವಿಳಾಸ, ದೂರವಾಣಿ ಸಂಖ್ಯೆ, ಎಪಿಕ್ ಸಂಖ್ಯೆ ಆಧಾರ್ ಕಾರ್ಡ ನಂ. | |
| 3 | ಫಲಾನುಭವಿಯ ವರ್ಗ | (ಸಾಮಾನ್ಯ/ಪಜಾ/ಪಪಂ/ಹಿ.ವರ್ಗ/ಮಹಿಳೆಯರು) |
| 4 | ಜಮೀನಿನ ವಿವರ | |
| 5 | ಅ) ವಿಸ್ತೀರ್ಣ, ಸರ್ವೆ ನಂ | ಖುಷ್ಕಿ/ನೀರಾವರಿ |
| | ಆ) ಹಾಲಿ ಇರುವ ಬೆಳೆಗಳು ಹಾಗೂ ವಿಸ್ತೀರ್ಣ | |
| 6 | ಪ್ರಸ್ತುತ ಪ್ರದೇಶ ದಲ್ಲಿರುವ ವಿವರಗಳು | |
| | • ಸರ್ವೆ ನಂ ಮತ್ತು ವಿಸ್ತೀರ್ಣ, | |
| | • ನೀರಾವರಿ ಸೌಲಭ್ಯ | ಬೋರ್ವೆಲ್/ಬಾವಿ/ಚಾನಲ್/ಕೆರೆ |
| | • ತಳಿಗಳ ವಿವರ (ಹೆಸರು) | |
| | • ನರ್ಸರಿ ಮೂಲ | |
| | • ನಾಟಿ ದಿನಾಂಕ | |
| 7 | ಪ್ರಸ್ತುತ ಬೆಳೆಗೆ ಅಳವಡಿಸಿ ಕೊಳ್ಳುವ/ ಕೊಂಡಿರುವ ವೈಜ್ಞಾನಿಕ ಬೇಸಾಯ ಪದ್ಧತಿಗಳ ವಿವರ | ಹನಿ ನೀರಾವರಿ/ Trench Planting /Contour Trench Planting /ಅಧಿಕ ಸಾಂದ್ರತೆ ನಾಟಿ/ನೆಲಹೊದಿಕೆ/ IPM/INM / ಅಂತರ ಬೇಸಾಯ, ಇತ್ಯಾದಿ |

| | | |
|---|---|---|
| 8 | ಈಗಾಗಲೇ ಇತರೆ ಯೋಜನೆಯಡಿ ಸದರಿ ಬೆಳೆಗೆ ಸಹಾಯಧನ ಪಡೆದಿದ್ದಾರೆ ಯೇ? ಪಡೆದಿದ್ದಲ್ಲಿ ವಿವರಗಳು | ಹೌದು/ಇಲ್ಲ |
| 9 | ಸಹಾಯಧನ ಪಡೆಯಲಿಚ್ಚಿಸಿರುವ ಯೋಜನೆಯನ್ನು ಇತರೇ ಯೋಜನೆಗಳಡಿ ಏಕೀಕರಿಸಿದ್ದಾರೆಯೇ? ಏಕೀಕರಿಸಿದ್ದಲ್ಲಿ ವಿವರ | ಹೌದು /ಇಲ್ಲ |
| 10 | ಖರ್ಚು ಭರಿಸಿದ ವಿವರ | |
| 11 | ಫಲಾನುಭವಿ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಹೆಸರು | |

ಮೇಲೆ ನೀಡಿರುವ ವಿವರಗಳು ಸರಿಯೆಂದು ನಾನು ದೃಢೀಕರಿಸುತೇನೆ ಹಾಗೂ ಸಂಬಂಧಿಸಿದ ಬೆಳೆಗೆ ಈ ಮೊದಲು ಇತರೆ ಯೋಜನೆಗಳಡಿ/ ಕಾರ್ಯಕ್ರಮದಡಿ ಯಾವುದೇ ಸಹಾಯಧನವನ್ನು ಪಡೆದಿರುವುದಿಲ್ಲವೆಂದು ಹಾಗೂ ಇಲಾಖೆ ಅಧಿಕಾರಿಗಳು ಯಾವುದೇ ಹಂತದಲ್ಲಿ ನನ್ನ ತಾಕಿಗೆ ಭೇಟಿ ನೀಡಬಹುದಾಗಿದೆ ಮತ್ತು **"ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಗೇರು ಅಭಿವೃದ್ಧಿ ಕಾರ್ಯಕ್ರಮ"ದಡಿ ಪ್ರದೇಶ ವಿಸ್ತರಣೆಗೆ** ಅಡಿ ಪಡೆದ ಸವಲತ್ತುಗಳನ್ನು ನಿಯಮಗಳಂತೆ ಪೂರ್ಣ ಬಳಕೆ ಮಾಡಿಕೊಳ್ಳುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ :

ದಿನಾಂಕ: ಫಲಾನುಭವಿಯ ಸಹಿ

**ರೈತರು ಅರ್ಜಿಯೊಂದಿಗೆ ಸಲ್ಲಿಸಬೇಕಾದ ಇತರೆ ದಾಖಲಾತಿಗಳು**

1. ಅರ್ಜಿ ನಮೂನೆ
2. ಫಲಾನುಭವಿಯ ಹೆಸರಿನಲ್ಲಿರುವ RTC
3. ಪರಿಶೀಲನಾಧಿಕಾರಿಗಳ ಧೃಡೀಕರಣ
4. ಪರಿಕರಗಳನ್ನು ಖರೀದಿಸಿದ TIN ಸಂಖ್ಯೆ ಇರುವ ಬಿಲ್ಲು/Claim Bill
5. ರೈತರ ತಾಕಿನ 3 ಹಂತದ ಜಿಪಿಎಸ್ (ಅನುಷ್ಠಾನ ಪೂರ್ವ, ಅನುಷ್ಠಾನ ಹಂತದ ಹಾಗೂ ಅನುಷ್ಠಾನ ನಂತರದ) ಛಾಯಚಿತ್ರ.
6. ಇತರೆ ಬೇಸಾಯ ಪದ್ಧತಿಗಳನ್ನು ಅಳವಡಿಸಿರುವುದಕ್ಕೆ ರೈತರಿಂದ ಸ್ವಯಂ ಘೋಷಣೆ.
7. ರೈತರ ಬ್ಯಾಂಕ್ ಖಾತೆಯುಳ್ಳ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.
8. ಇತರೆ ದಾಖಲಾತಿಗಳು.

# ಅಧಿಕಾರಿಗಳ ಕ್ಷೇತ್ರ ಪರಿಶೀಲನಾ ವರದಿ

ದಿನಾಂಕ:____________ರಂದು ಶ್ರೀ/ಶ್ರೀಮತಿ______________ ರವರ ಜಮೀನಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದ್ದು, ಸದರಿಯವರಿಗೆ ಸೇರಿದ ____________ ಗ್ರಾಮದ __________ ಸರ್ವೆ ನಂಬರ್‌ನಲ್ಲಿನ _____________ ವಿಸ್ತೀರ್ಣದಲ್ಲಿ ____________ ಹೆಕ್ಟೇರ್ ಪ್ರದೇಶದಲ್ಲಿ ಗೇರು ಪ್ರದೇಶ ವಿಸ್ತರಣೆ ಕೈಗೊಂಡಿದ್ದು, ಸದರಿಯವರಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಗೇರು ಅಭಿವೃದ್ಧಿ ಕಾರ್ಯಕ್ರಮದಡಿ ಶೇ.________ರಂತೆ ರೂ.____________ ಸಹಾಯಧನವನ್ನು ನೀಡಬಹುದೆಂದು ಹಾಗೂ ಈ ಫಲಾನುಭವಿಯು ಇದೇ ಬೆಳೆಗೆ ಇತರೇ ಯಾವುದೇ ಕೇಂದ್ರ/ರಾಜ್ಯ ವಲಯ ಯೋಜನೆಗಳಿಂದ ಸವಲತ್ತುಗಳನ್ನು ಪಡೆದಿಲ್ಲವೆಂದು ದೃಢೀಕರಣ ನೀಡಿರುವುದನ್ನು ಸಹ ಪರಿಶೀಲಿಸಲಾಯಿತು.

ಸದರಿ ರೈತರು ಅಳವಡಿಸಿರುವ ಬೇಸಾಯ ಕ್ರಮಗಳು ಇಂತಿವೆ.

1. ____________
2. ____________
3. ____________

ಸಹಾಯಕ ತೋಟಗಾರಿಕೆ ಅಧಿಕಾರಿ (RSK)

(ಹೆಸರು, ಸಹಿ ಮತ್ತುಮೊಹರು)

# ಅಧಿಕಾರಿಗಳ ಧೃಡೀಕರಣ

ಮೇಲ್ಕಂಡ ಫಲಾನುಭವಿಯು ಗೇರು ಬೆಳೆಯನ್ನು __________ ಹೆಕ್ಟೇರ್ ಪ್ರದೇಶದಲ್ಲಿ ನಾಟಿ ಮಾಡಿದ್ದು, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಗೇರು ಅಭಿವೃದ್ಧಿ ಕಾರ್ಯಕ್ರಮದಡಿ ಮಾರ್ಗಸೂಚಿಯನ್ವಯ ಅಳವಡಿಸಿರುತ್ತಾರೆ ಎಂದು ಧೃಡೀಕರಿಸಿದೆ. ಇವರಿಗೆ ಇಲಾಖಾ ಮಾರ್ಗಸೂಚಿ ನಿಯಮದಂತೆ ಶೇ.__________ರ ಸಹಾಯಧನ ರೂ.__________ಗಳನ್ನು ಮಂಜೂರು ಮಾಡಬಹುದು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

(ಜಿಪಂ), ______________ ತಾಲ್ಲೂಕು.